ಉಪಾಧ್ಯಕ್ಷರು:- ಡಿಬೇಟ್ ಬೇಡ.

ಶ್ರೀ ಡಿ.ವಿ. ಸದಾನಂದಗೌಡ:- (ಪುತ್ತೂರು) ಮೂಲತ: ಕೊರಗ ಜನಾಂಗದವರು ಅಲೆಮಾರಿ ಸ್ವಭಾವದವರು. ಅವರು ಒಂದು ಕಡೆ ಉಳಿಯುವುದಿಲ್ಲ. ಬುಟ್ಟಿ ಹೆಣೆಯುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಇವರನ್ನು ಒಂದೇ ಕಡೆ ಯಾವುದಾದರೂ ಕಾಲೋನಿಗಳನ್ನು ಮಾಡಿ ಅವರಿಗೆ ವ್ಯವಸ್ಥೆಯನ್ನು ಮಾಡುವ ಯೋಜನೆಯೇನಾದರೂ ಸರ್ಕಾರ ಮಾಡಿದೆಯೇ? ಅವರ ಅಲೆಮಾರಿ ಜೀವನವನ್ನು ನಿಲ್ಲಿಸುವ ಯೋಜನೆ ಸರ್ಕಾರಕ್ಕೇನಾದರೂ ಇದೆಯೇ? ಏಕೆಂದರೆ, ನೀವು ಅವರಿಗೆ ರಿಕ್ಷಾ ಕೊಟ್ಟರೆ, ವಿದ್ಯೆ ಕೊಟ್ಟರೆ ಅವರಲ್ಲಿ ಉಳಿಯುವುದಿಲ್ಲ.

ಶ್ರೀ ಕುಂಬ್ಳೆ ಸುಂದರರಾವ್: ನಾನು ಕೇಂದ್ರದಿಂದ ಬಂದ ನಾಲ್ಕು ಕೋಟಿ ರೂಪಾಯಿಗಳ ಅನುದಾನ ಉಪಯೋಗವಾಗಿಲ್ಲವೆಂದು ಕೇಳಿದ್ದಕ್ಕೆ ಸಚಿವರು ಇನ್ನೂ ಉತ್ತರ ಕೊಟ್ಟಿಲ್ಲ. ನನಗೆ ಸಿಕ್ಕಿರುವ ಮಾಹಿತಿ ತಪ್ಪು ಎಂದಾಗಬೇಕು ಇಲ್ಲ ನಾಲ್ಕು ಕೋಟಿ ರೂಪಾಯಿಗಳನ್ನು ಕೊರಗ ಸಮುದಾಯಕ್ಕೆ ಬಳಸದೆ ಮತ್ತಾವುದೋ ಉದ್ದೇಶಕ್ಕೆ ಬಳಸಿದ್ದೀರಿ ಎಂದಾಗಬೇಕು. ಯಾವುದು ಸತ್ಯ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಅಲೆಮಾರಿ ಜನಾಂಗವಾದರೂ ಕೂಡ ಅಲ್ಲಿ ಅಲ್ಪಸ್ವಲ್ಪ ಜಮೀನನ್ನು ಅವರು ಇಟ್ಟುಕೊಂಡಿದ್ದಾರೆ. ಅಲೆಮಾರಿ ಜನಾಂಗ ಕೂಡ ಅಲ್ಲಿ ವಾಸಮಾಡುವ ವಿಧಾನವನ್ನು ಕಲಿತಿದ್ದಾರೆ. ಓಪನ್ ವೆಲ್‌ಗಳನ್ನು ಕೊರೆಯುವ ಕಾರ್ಯಕ್ರಮವಿದೆ. ಕೇಂದ್ರದವರು ಅನುದಾನ ಕೊಟ್ಟಿದ್ದು, ಗೈಡ್‌ಲೈನ್ಸ್ ಕೊಟ್ಟಿಲ್ಲ. ಅದನ್ನು ಸರ್ಕಾರ ಪಡೆಯುತ್ತಿದೆ. ಅದರ ಆಧಾರದ ಮೇಲೆ ಪ್ರಾಮಾಣಿಕವಾಗಿ ಅವರು ಅವರ ಕಾಲ ಮೇಲೆ ನಿಲ್ಲುವ ಹಾಗೆ ಯೋಜನಾ ಬದ್ಧ ಯೋಜನೆಯನ್ನು ಸರ್ಕಾರ ಹಾಕಿಕೊಳ್ಳುತ್ತಿದೆ.

ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ

240 (1638)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) ರಾಜ್ಯದಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಒಂದೊಂದು ಅಂಬೇಡ್ಕರ್ ಭವನ ನಿರ್ಮಿಸಲು ಸರ್ಕಾರ ಒಪ್ಪಿಕೊಂಡಿರುವುದು ನಿಜವೇ?

(ಆ) ಹಾಗಿದ್ದಲ್ಲಿ ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಅಂಬೇಡ್ಕರ್ ಭವನ ಎಂದು ನಿರ್ಮಾಣ ಮಾಡಲಾಗುವುದು, ಹಾಗೂ ಇದಕ್ಕಾಗಿ ಒದಗಿಸಲಾದ ಅನುದಾನ ಎಷ್ಟು?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

(ಅ) ಹೌದು.

(ಆ) ಸರ್ಕಾರಿ ಆದೇಶ ಸಂಖ್ಯೆ. ಸಕಇ 51 ಪಕವಿ 94 ದಿನಾಂಕ 26-9-94ರಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಮಿನಿ ಅಂಬೇಡ್ಕರ್ ಭವನಗಳನ್ನು ನಿರ್ಮಿಸಲು ಆದೇಶಿಸಿದೆ. ಅದರಂತೆ ಇದುವರೆವಿಗೂ 167 ಸ್ಥಳಗಳಲ್ಲಿ ಮಿನಿ ಅಂಬೇಡ್ಕರ್ ಭವನಗಳ ನಿರ್ಮಾಣಕ್ಕಾಗಿ ಸರ್ಕಾರ ಮುಂಜೂರಾತಿ ನೀಡಿದೆ. ಆದರೆ, ಈ 167 ಸ್ಥಳಗಳಲ್ಲಿ ಉಳ್ಳಾಲ ವಿಧಾನ ಸಭಾ ಕ್ಷೇತ್ರವು ಸೇರಿರುವುದಿಲ್ಲ. ಬಾಕಿ ಉಳಿದಿರುವ ವಿಧಾನಸಭಾ ಕ್ಷೇತ್ರಗಳಲ್ಲಿ (ಉಳ್ಳಾಲ ವಿಧಾನಸಭಾ ಕ್ಷೇತ್ರವೂ ಸೇರಿದಂತೆ) ಮಿನಿ

ಅಂಬೇಡ್ಕರ್ ಭವನಗಳ ನಿರ್ಮಾಣಕ್ಕಾಗಿ ಸ್ಥಳಗಳನ್ನು ಗುರುತಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ನಿಗದಿಪಡಿಸಿರುವ ಹಾಗೆ ಪ್ರತಿ ಭವನಕ್ಕೆ ಸರ್ಕಾರದ ಆದೇಶ ಸಂಖ್ಯೆ. ಸಕಇ 560 ಪಕವಿ 96 ದಿನಾಂಕ 19-8-98ರಲ್ಲಿ 5.00ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗುವುದು.

ಶ್ರೀ ಕೆ. ಜಯರಾಮಶೆಟ್ಟಿ:- 1994ರಲ್ಲಿ ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರಗಳಿಗೆ ಒಂದೊಂದು ಅಂಬೇಡ್ಕರ್ ಭವನವನ್ನು ಕೊಡತ್ತೇವೆಂದು ರಾಜ್ಯ ಸರ್ಕಾರ ನಿರ್ಧಾರ ಮಾಡಿತ್ತು. ಆದರೆ, ನಾಲ್ಕು ವರ್ಷಗಳು ಕಳೆದ ನಂತರವೂ 167 ಅಂಬೇಡ್ಕರ್ ಭವನಗಳನ್ನು ಕೊಟ್ಟಿದೆ ಎಂದು ಹೇಳುತ್ತಿದ್ದಾರೆ. ನಾನು ಕೇಳುವುದೇನೆಂದರೆ, ಇಷ್ಟು ವರ್ಷಗಳಲ್ಲಿ ನೀವು ಎಷ್ಟು ಹಣವನ್ನು ಅದಕ್ಕೆಂದು ನಿಗದಿಪಡಿಸಿದ್ದೀರಿ? ಈಗಾಗಲೇ ನಾನು ಕೇಳಿದಾಗಲೂ ಸರ್ಕಾರಿ ಆದೇಶ ನಮ್ಮ ಇಲಾಖೆಗೆ ಮುಟ್ಟಿಲ್ಲವೆಂದು, ನಮಗೆ ಗೊತ್ತಿಲ್ಲವೆಂದು ಸಮಾಜ ಕಲ್ಯಾಣ ಇಲಾಖೆಯವರು ಹೇಳುತ್ತಾರೆ. ನೀವು ಮಾಡಿದೆ ಎಂದು ಹೇಳುತ್ತಿದ್ದೀರಿ. ಯಾವ ಆದೇಶದ ಪ್ರಕಾರ ಅವರ ಇಲಾಖೆಗೆ ಬರೆದಿದ್ದೀರಿ ಎಂಬುದನ್ನು ಹೇಳುತ್ತೀರಾ.?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ :- 167 ಕಡೆಗಳಲ್ಲಿ ಮಂಜೂರಾತಿ ಕೊಟ್ಟಿದ್ದರೂ ಕೂಡ ಕೆಲವು ಕಡೆ ಸ್ಥಳಾಭಾವ ಇದೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸರ್ಕಾರದ ವತಿಯಿಂದ ಸೂಚನೆ ಕೊಟ್ಟು, 224 ಕಡೆಗಳಲ್ಲೂ ಸ್ಥಳಗಳನ್ನು ಕಾದಿರಿಸಿ ಎಂದು ಹೇಳಿದ್ದೇವೆ. ಉಳ್ಳಾಲದಲ್ಲಿ ಸ್ಥಳವನ್ನು ಕಾದಿರಿಸಿದರೆ ತಕ್ಷಣ ಹಣವನ್ನು ಮುಜೂರಾತಿ ಮಾಡುತ್ತೇನೆ. ಈ ಸಾಲಿನಲ್ಲೇ ಕೊಡುತ್ತೇನೆ. ಕೆಲವು ಕಡೆ ಸ್ಥಳಾಭಾವದಿಂದ ಕಟ್ಟಡ ನಿರ್ಮಾಣ ಸ್ಥಗಿತವಾಗಿದೆ.

ಶ್ರೀ ಕೆ.ಜಯರಾಮಶೆಟ್ಟಿ :- ಅಲ್ಲಿ ಸ್ಥಳಾಭಾವ ಇಲ್ಲ. ಆದೇಶ, ನಿಮ್ಮ ಹಣ ಮುಟ್ಟಿಲ್ಲ. ತಾವು ಹಣವನ್ನು ಇವತ್ತು ಕೊಟ್ಟರೆ, ಸ್ಥಳ ಕೊಡಬಹುದು. ನಿಮ್ಮ ನಿಷ್ಕ್ರಿಯತೆಯನ್ನು ಹೇಳುತ್ತಿದ್ದೇನೆ, ಬೇಜಾರು ಮಾಡಿಕೊಳ್ಳಬೇಡಿ. ಸರ್ಕಾರದಿಂದ ಹಣ ಬಿಡುಗಡೆ ಮಾಡಿದ್ದೀರಾ? ಮಾಡಿದ್ದರೆ, ಎಷ್ಟು?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- 167 ಕಡೆಗಳಲ್ಲೂ ಹಣವನ್ನು ಮಂಜೂರು ಮಾಡಲಾಗಿದೆ. ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಗಟಾರಗಳಲ್ಲಿನ ಹೂಳು ತೆಗೆಯುವದು.

241: (1532)

ಶ್ರೀ. ಅಶೋಕ್ ಶಂಕರ ಕಾಟ್ಪೆ, (ಹುಬ್ಬಳ್ಳಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ 1996-97 ಸಾಲಿನಲ್ಲಿ ಗಟಾರಗಳಲ್ಲಿನ ಹೂಳು ತೆಗೆಯುವ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಹೂಳನ್ನು ಎಲ್ಲಿಗೆ ಸಾಗಿಸಲಾಗಿದೆ?

ಇ) 1996ರಿಂದ ಈ ವರೆಗೆ ಈ ಬಗ್ಗೆ ಖರ್ಚುಮಾಡಿದ ಮೊತ್ತವೆಷ್ಟು?

ಈ) ಹೂಳು ತೆಗೆಯದೇ ಖರ್ಚು ಹಾಕಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು.) :